(ಇಂದು ದಿನಾಂಕ 20-09-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

(ಸಾಕ್ಷಿದಾರರು ಕೊಂಕಣಿ ಭಾಷೆ ಮಾತನಾಡುವವರಾಗಿದ್ದು, ಆದ್ದರಿಂದ ವಕೀಲರಾಗಿರುವ ಶ್ರೀ ವಿ.ಜಿ.ಎ. ವಕೀಲರನ್ನು ಭಾಷೆಗೆ ಭಾಷಾಂತರ ಮಾಡಲು ನೇಮಿಸಿಕೊಳ್ಳಲಾಯಿತು.)

**ಪಾಟೀ ಸವಾಲುಃ ಫಿರ್ಯಾದುದಾರರ ಪರ ಶ್ರೀ ಎನ್.ವಿ.ಆರ್. ವಕೀಲರಿಂದಃ**

ನಾನು 10 ನೇ ತರಗತಿವರೆಗೆ ಓದಿದ್ದೇನೆ. ನಾನು ಮರಾಠಿ ಮಾಧ್ಯಮದಲ್ಲಿ ಓದಿದ್ದೇನೆ. ವಿನೋದ ಸುರೇಶ ನಾಯ್ಕ ಇವರ ಪರಿಚಯ ಇಲ್ಲ. ಸದರಿಯವರು ನನ್ನ ಮೇಲೆ ದೂರು ಕೊಟ್ಟಿದ್ದರು ಎಂದರೆ ಸರಿಯಲ್ಲ. ವಿನೋದ ಸುರೇಶ ನಾಯ್ಕ ಇವರು ನೀಡಿದ ದೂರಿನನ್ವಯ ಪೊಲೀಸರು ನನ್ನನ್ನು ಠಾಣೆಗೆ ಕರೆದಿದ್ದರು ಎಂದರೆ ಸರಿ. ವಿನೋದ ಸುರೇಶ ನಾಯ್ಕ ಇವರು ಕೆಎ-20-ಸಿ-6192 ಟಾಟಾ ಸುಮೋವನ್ನು ನಾನು ತೆಗೆದುಕೊಂಡು ಹೋಗಿ ಗುಜರಿ ಅಂಗಡಿಗೆ ಹಾಕಿದ್ದೇನೆ ಎಂದು ದೂರು ಕೊಟ್ಟಿದ್ದರು ಎಂದರೆ ಸರಿ. ಈಗ ಒಂದು ಪೊಲೀಸರು ಕೊಟ್ಟಂತಹ ಸ್ವೀಕೃತಿಯನ್ನು ಸಾಕ್ಷಿಗೆ ತೋರಿಸಿದ್ದು ಸದರಿ ಸ್ವೀಕೃತಿಯನ್ನು ಸಾಕ್ಷಿ ಒಪ್ಪಿಕೊಂಡಿದ್ದರಿಂದ ಅದನ್ನು ನಿ.ಪಿ. 24 ಎಂದು ಗುರುತಿಸಲಾಯಿತು. ನಾನು ಸದರಿ ಸುಮೋವನ್ನು ಗುಜರಿಗೆ ಹಾಕಿರಲಿಲ್ಲ. ವಿನೋದ ನಾಯ್ಕ ಇವರಿಗೆ ರೂ. 1,80,000-00 ಹಣವನ್ನು ಕೊಡಲು ಒಪ್ಪಿಕೊಂಡಿದ್ದೆ ಎಂದರೆ ಸರಿಯಲ್ಲ. ಪೊಲೀಸರು ಸ್ವೀಕೃತಿಯಲ್ಲಿ ಪ್ರತಿ ತಿಂಗಳು ರೂ. 30,000-00 ರಂತೆ ಒಟ್ಟೂ ರೂ. 1,80,000-00 ಹಣವನ್ನು ಕೊಡಲು ಒಪ್ಪಿಕೊಂಡಿದ್ದಕ್ಕೆ ಪೊಲೀಸರು ಸ್ವೀಕೃತಿ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಡಾ. ಶಿವಾನಂದ ಇವರ ಬಗ್ಗೆ ನಾನು ಯು-ಟೂಬ್ ನಲ್ಲಿ ಒಂದು ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿ. ಈ ಕೇಸಿನ ಬಗ್ಗೆ ನಾನು ಸದರಿ ಹೇಳಿಕೆಯನ್ನು ಕೊಟ್ಟಿದ್ದೆ. ಬೇರೆ ಯಾವುದೇ ಕೇಸಿನ ಬಗ್ಗೆ ನಾನು ಹೇಳಿಕೆ ಕೊಟ್ಟಿಲ್ಲ. ಸದರಿ ಯು-ಟೂಬ್‌ನಲ್ಲಿ ಕೊಟ್ಟಂತಹ ಹೇಳಿಕೆಯಲ್ಲಿ 1 ನೇ ಆರೋಪಿ ಸಹ ಇದ್ದಾರೆ ಎಂದರೆ ಸರಿ.

1 ನೇ ಆರೋಪಿಯ ಪರಿಚಯ ನನಗೆ ಇಲ್ಲ. 1 ನೇ ಆರೋಪಿಯ ಯು-ಟೂಬ್‌ನಲ್ಲಿ ಹೇಳಿಕೆ ಕೊಡಲು ನನಗೆ ಯಾರೂ ಹೇಳಿರಲಿಲ್ಲ, ನಾನೇ ಹೇಳಿದ್ದೆ. 1 ನೇ ಆರೋಪಿ ಯು-ಟೂಬ್‌ನಲ್ಲಿ ವಿಡಿಯೋ

ಹಾಕುತ್ತಾರೆ ಎಂದು 1 ನೇ ಆರೋಪಿ ಹೇಳಿದ್ದರ ಮೇರೆಗೆ ಗೊತ್ತಾಗಿದೆ. ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳಬಾರದು ಅನ್ನುವ ವಿಷಯ ಗೊತ್ತಿದೆ. ನನ್ನನ್ನು ವಿಡಿಯೋ ಮಾಡಲು ಯಾರೂ ಕರೆದಿರಲಿಲ್ಲ, ನಾನಾಗಿಯೇ ಒಂದನೇ ಆರೋಪಿಯ ಕಚೇರಿಗೆ ಹೋಗಿದ್ದೆ. 1 ನೇ ಆರೋಪಿ ವಿಡಿಯೋ ಯು-ಟ್ಯೂಬ್‌ನಲ್ಲಿ ಹಾಕುತ್ತಾರೆ ಎಂದು ನಾನು ಯಾವ ದಿನ ಹೇಳಿಕೆಯನ್ನು ಯು-ಟ್ಯೂಬ್‌ನಲ್ಲಿ ಕೊಟ್ಟಿದ್ದೇನೋ ಆ ದಿನ ಗೊತ್ತಾಗಿದೆ. ಈ ಎರಡು ತಿಂಗಳ ಅವಧಿಯಲ್ಲಿ ಸದರಿ ಹೇಳಿಕೆಯನ್ನು ನೀಡಿದ್ದೇನೆಎಂದರೆ ಸರಿಯಲ್ಲ. 1 ನೇ ಆರೋಪಿಯ ಯು-ಟ್ಯೂಬ್‌ನಲ್ಲಿ ಹೇಳಿಕೆ ಕೊಟ್ಟಂತಹ ದಿನಾಂಕ ನೆನಪಿಲ್ಲ. ಇಂದಿನಿಂದ ಒಂದು ತಿಂಗಳ ಹಿಂದೆ ನಾನು ಸದರಿ ಹೇಳಿಕೆಯನ್ನು ಕೊಟ್ಟಿದ್ದೇನೆ. 1 ನೇ ಆರೋಪಿಯ ಕಚೇರಿಗೆ ನಾನು ಅವರನ್ನು ಭೇಟ್ಟಿಯಾಗಲು ಹೋಗಿದ್ದೆ. ಕೆಲವರು ಬಂದು ಫಿರ್ಯಾದಿಗೆ ಬೆಂಬಲ ನೀಡು 1 ನೇ ಆರೋಪಿಗೆ ನೀಡಬೇಡ ಎಂದು ನನ್ನ ಒತ್ತಡ ಮಾಡಲು ಬಂದಾಗ ಅಲ್ಲಿಗೆ ಹೋಗಿದ್ದೆ. ನನಗೆ ಒತ್ತಾಯ ಮಾಡಿದವರ ಹೆಸರನ್ನು ಹೇಳಿದರೆ ನನಗೆ ತೊಂದರೆಯಾಗುತ್ತದೆ. ನ್ಯಾಯಾಲಯದ ಮುಂದೆಯೂ ಸಹ ನಾನು ಅವರ ಹೆಸರನ್ನು ಹೇಳಿದರೆ ನನಗೆ ತೊಂದರೆಯಾಗುತ್ತದೆ. ನನಗೆ ಒತ್ತಾಯ ಮಾಡಿದವರು ಈಗ ನ್ಯಾಯಾಲಯದಲ್ಲಿ ಇಲ್ಲ ಎಂದರೆ ಸರಿ. ನನಗೆ ಒತ್ತಾಯ ಮಾಡಿದವರ ವಿರುದ್ಧ ನಾನು ದೂರನ್ನು ಕೊಟ್ಟಿಲ್ಲ. ನನಗೆ ಯಾರೂ ಒತ್ತಡ ಹಾಕಿಲ್ಲ ಎಂದರೆ ಸರಿಯಲ್ಲ.

1 ನೇ ಆರೋಪಿ ಆ್ಯಂಬುಲೆನ್ಸಿನ ಭಾವಚಿತ್ರ ತೆಗೆದಿದ್ದನ್ನು ಫಿರ್ಯಾದಿಗೆ ಯಾರು ಹೇಳಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ಯಾವುದೇ ಕಾಗದಪತ್ರಗಳಿಗೆ ಸಹಿ ಹಾಕುವಾಗ ನಾನು ಅದರಲ್ಲಿರುವ ವಿಷಯಗಳನ್ನು ಓದಿ ತಿಳಿದುಕೊಂಡು ಹಾಕುತ್ತೇನೆ ಎಂದರೆ ಸರಿ. ಫಿರ್ಯಾದಿ ಸಹಿ ಹಾಕು ಎಂದು ಹೇಳಲಾದ ಪತ್ರವನ್ನು ಬರೆದ ವ್ಯಕ್ತಿಯ ಹೆಸರು ಆತ್ಮಾರಾಮ, ಸೆಕ್ಯೂರಿಟಿ. ಆ ಪತ್ರದ ಪ್ರತಿಯನ್ನು ಕೊಡಲು ಆತ್ಮಾರಾಮನಿಗಾಗಲೀ, ಫಿರ್ಯಾದಿದಾರರಿಗಾಗಲೀ ನಾನು ಕೇಳಿಲ್ಲ. ಪತ್ರದಲ್ಲಿ ಏನು ಬರೆದಿದೆ ಎಂದು ಮಾರನೇ ದಿನ ನನಗೆ ಪೊಲೀಸ್ ಠಾಣೆಯಿಂದ ಫೋನ್ ಬಂದ ನಂತರ ಗೊತ್ತಾಗಿದೆ. ಶಿರವಾಡ

ಜಾಂಬಾದಲ್ಲಿ ನಾನು ಗ್ಯಾರೇಜ್ ಇಟ್ಟಿದ್ದೇನೆ ಎಂದರೆ ಸರಿ. ಗ್ಯಾರೇಜಿನ ಉದ್ಘಾಟನೆಗೆ ಸಾಕಷ್ಟು ಜನರನ್ನು ಕರೆದಿದ್ದೆ ಎಂದರೆ ಸರಿಯಲ್ಲ. ಫಿರ್ಯಾದಿಗೆ ನಾನು ಸದರಿ ಗ್ಯಾರೇಜಿನ ಉದ್ಘಾಟನೆಗೆ ಕರೆದಿದ್ದೆ ಎಂದರೆ ಸರಿಯಲ್ಲ. 1 ನೇ ಆರೋಪಿ ನನಗೆ ಒಳ್ಳೆಯ ಸ್ನೇಹಿತ ಮತ್ತು ಸಂಬಂಧಿ ಎಂದರೆ ಸರಿಯಲ್ಲ. ಫಿರ್ಯಾದಿ ಪತ್ರದಲ್ಲಿ ಏನು ಬರೆದಿದ್ದಾರೆ ಎಂದು ನನಗೆ ತಿಳಿಸದೇ ಸಹಿ ತೆಗೆದುಕೊಂಡಿದ್ದಾರೆ ಎಂದು ನಾನು ಅವರ ವಿರುದ್ಧ ದೂರನ್ನು ಕೊಟ್ಟಿಲ್ಲ. ದೂರನ್ನು ಕೊಡಲು ನನಗೆ ತೊಂದರೆ ಇರಲಿಲ್ಲ ಎಂದರೆ ಸರಿ. ಈ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಬಿಟ್ಟು ಫಿರ್ಯಾದಿ ಸುಳ್ಳು ಮಾಹಿತಿಕೊಟ್ಟು ಸಹಿ ತೆಗೆದುಕೊಂಡಿದ್ದಾರೆ ಎಂದು ಎಲ್ಲಿಯೂ ಹೇಳಿಲ್ಲ ಎಂದರೆ ಸಾಕ್ಷಿ ಪೊಲೀಸ್ ಠಾಣೆಯಲ್ಲಿ ಹೇಳಿದ್ದೇನೆ ಎಂದು ಹೇಳುತ್ತಾರೆ.

ಕಾರವಾರ ಮೆಡಿಕಲ್ ಕಾಲೇಜಿನಲ್ಲಿ ಕೆಲಸ ಮಾಡುವಾಗ ಆ್ಯಂಬುಲೆನ್ಸಗೆ ಪೆಟ್ರೋಲ್ ಹಾಕದೇ ನೀರು ಹಾಕಿದ್ದೇನೆ ಎಂದು ಆಪಾದನೆ ಬಂದಿತ್ತು ಎಂದರೆ ಸಾಕ್ಷಿ ಆ ರೀತಿ ಹೇಳಿದ್ದರು ಆದರೆ ನಾನು ಆ ರೀತಿ ಮಾಡಿರಲಿಲ್ಲ ಎಂದು ಹೇಳುತ್ತಾರೆ. ಆ ರೀತಿ ಫಿರ್ಯಾದಿ ಆರೋಪ ಮಾಡಿದ್ದಾರೆ. ಆ್ಯಂಬುಲೆನ್ಸಗೆ ಇನ್ನೊಬ್ಬ ಚಾಲಕ ಶಶಾಂಕ ಎಂದು ಇದ್ದರು ಎಂದರೆ ಸರಿ. ನಾನು ಟ್ಯಾಂಕಿಗೆ ನೀರು ಹಾಕಿದ್ದನ್ನು ಶಶಾಂಕ ಇವರು ಹೇಳಿಕೊಟ್ಟಿದ್ದರುಎಂದರೆ ನನಗೆ ಗೊತ್ತಿಲ್ಲ. ಆ್ಯಂಬುಲೆನ್ಸ ಟ್ಯಾಂಕ್‌ಗೆ ನೀರನ್ನು ಹಾಕಿದ್ದನ್ನು ಫಿರ್ಯಾದಿ ನೋಡಿಲ್ಲ ಎಂದರೆ ಸರಿ. ನೀರು ಇರುವ ವಿಷಯ ಗ್ಯಾರೇಜಿನಲ್ಲಿ ಗೊತ್ತಾಗಿದೆ ಎಂದರೆ ಸರಿ. ಸವಿಲ್ ಆಸ್ಪತ್ರೆಯಲ್ಲಿ ನಾನು ಆ್ಯಂಬುಲೆನ್ಸ ಚಾಲಕನಾಗಿ ಕೆಲಸ ಮಾಡುತ್ತಿದ್ದೆ. ನಾನುಯಾವ ಆ್ಯಂಬುಲೆನ್ಸನಲ್ಲಿ ಕೆಲಸ ಮಾಡುತ್ತಿದ್ದೆನೋ ಅದೇ ಆ್ಯಂಬುಲೆನ್ಸನ ಟ್ಯಾಂಕ್‌ನಲ್ಲಿ ನೀರು ಕಂಡು ಬಂದಿತ್ತು ಎಂದರೆ ಸರಿಯಲ್ಲ. ಯಾವ ನಂಬರಿನ ಆ್ಯಂಬುಲೆನ್ಸನ ನಂಬರಿನಲ್ಲಿ ನೀರು ಹಾಕಲಾಗಿತ್ತು ಎಂದರೆ ಸಾಕ್ಷಿ ಸಾಕಷ್ಟು ಆ್ಯಂಬುಲೆನ್ಸ ಇದ್ದುದರಿಂದ ನನಗೆ ನಂಬರ ಹೇಳಲು ಆಗುವುದಿಲ್ಲ. ನೀವು ಚಾಲನೆ ಮಾಡುತ್ತಿದ್ದ ಆ್ಯಂಬುಲೆನ್ಸ ಸಂಖ್ಯೆ ಏನು ಎಂದರೆ ಸಾಕ್ಷಿ ಆ ರೀತಿ ಒಬ್ಬರಿಗೆ ಒಂದು ಆ್ಯಂಬುಲೆನ್ಸ ಎಂದು ನಿಗದಿ ಮಾಡಿರಲಿಲ್ಲ ಎಂದು ಹೇಳುತ್ತಾರೆ. ಗೋಪಶಿಟ್ಟಾ ಎನ್ನುವ ಊರಿನಲ್ಲಿ ನಾನು ಸಿಲೆಂಡರನ್ನು ಕಳ್ಳತನ ಮಾಡಿದ್ದೇನೆ ಎಂಬ ಆರೋಪ ಇದೆ ಎಂದರೆ

ಸರಿಯಲ್ಲ. ಗೋಪಶಿಟ್ಟಾ ಊರಿನಲ್ಲಿರುವ ರಾಣಾ ಅವರ ಮನೆಗೆ ಹೋಗುತ್ತಿರಲಿಲ್ಲ. ಗೋಪಶಿಟ್ಟಾ ಊರಿನ ಪರಿಚಯ ಇದೆ. ಗೋಪ ಶಿಟ್ಟಾ ಗ್ರಾಮಕ್ಕೆ ಸಂಬಂಧಪಟ್ಟಂತಹ ಒಂದು ಕೇಸಿನಲ್ಲಿ ನನಗೆ ಠಾಣೆಗೆ ಕರೆದಿದ್ದರು ಎಂದರೆ ಸರಿ. ಯಾರು ದೂರನ್ನು ಕೊಟ್ಟಿದ್ದರು ಎಂದು ನನಗೆ ಗೊತ್ತಿಲ್ಲ. ಸಿಲೆಂಡರ ಕಳ್ಳತನ ಆಗಿದ್ದರ ಹಿನ್ನಲೆಯಲ್ಲಿ ನನ್ನನ್ನು ಪೊಲೀಸ್ ಠಾಣೆಗೆ ಕರೆದಿದ್ದರು. ನನ್ನ ಮೇಲೆ ಸಾಕಷ್ಟು ಆರೋಪಗಳು ಇರುವುದರಿಂದ 1 ನೇ ಆರೋಪಿಯ ಸಹಾಯವನ್ನು ನಾನು ತೆಗೆದುಕೊಳ್ಳುತ್ತೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಸತ್ಯಾಸತ್ಯತೆಗಳು ಇಲ್ಲದೇ ಒಬ್ಬ ವ್ಯಕ್ತಿಯ ಮೇಲೆ ವಿಡಿಯೋ ಮಾಡಿ ಸಾಮಾಜಿಕ ತಾಣಗಳಲ್ಲಿ ಹರಿ ಬಿಟ್ಟರೆ ಅವರಿಗೆ ಸಮಾಜದಲ್ಲಿ ತೊಂದರೆಯಾಗುತ್ತದೆ ಎಂದರೆ ಸರಿ. 1 ನೇ ಆರೋಪಿಯ ಮಾತನ್ನು ಕೇಳಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆ್ಯಂಬುಲೆನ್ಸ ಹೊರ ಗುತ್ತಿಗೆ ಆಧಾರದ ಮೇಲೆ ಚಾಲಕನಾಗಿ ಕೆಲಸ ಮಾಡುತ್ತಿದ್ದೆ ಎಂದರೆ ಸರಿ. ಈಗ ನೀವು ಗ್ಯಾರೇಜ್ ನಡೆಸುತ್ತಿದ್ದಿಯಾ ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ಕಾಲಿಗೆ ಪೆಟ್ಟಾಗಿದ್ದರಿಂದ ನಡೆಸುತ್ತಿಲ್ಲ ಎಂದು ಹೇಳುತ್ತಾರೆ. 1 ನೇ ಆರೋಪಿ ಆ್ಯಂಬುಲೆನ್ಸನ ಭಾವಚಿತ್ರ ತೆಗೆದ್ದಾರೆ ಎಂದು ಹೇಳಲಾದ ದಿನಾಂಕದಂದು ನಾನು ಫಿರ್ಯಾದಿಗೆ ಫೋನ್ ಮಾಡಿಲ್ಲ, ಫಿರ್ಯಾದಿಯೂ ಸಹ ನನಗೆ ಫೋನ್ ಮಾಡಿಲ್ಲ. ಫಿರ್ಯಾದಿ ಪತ್ರವನ್ನು ಬರೆದು ಅದಕ್ಕೆ ನನ್ನ ಸಹಿಯನ್ನು ಒತ್ತಾಯಪೂರ್ವಕವಾಗಿ ತೆಗೆದುಕೊಂಡಿಲ್ಲ ಅನ್ನುವುದೂ ಸರಿಯಲ್ಲ. ಫಿರ್ಯಾದಿಯವರು 1 ನೇ ಆರೋಪಿ ವೆಂಟಿಲೇಟರಗೆ ಹಾನಿ ಮಾಡಿದ್ದಾನೆ ಎಂದು ಪೊಲೀಸ್ ಠಾಣೆಗೆ ಹೇಳಿಕೆ ಕೊಡಲು ಒತ್ತಾಯ ಮಾಡಿಲ್ಲಅನ್ನುವುದು ಸರಿಯಲ್ಲ. ಫಿರ್ಯಾದಿ ನನಗೆ ಯಾವತ್ತೂ ಕೂಡ ಕಿರಿಕಿರಿ ಮಾಡಿಲ್ಲ ಅನ್ನುವುದು ಸರಿಯಲ್ಲ. ನಾನುರಾಜಿನಾಮೆ ಕೊಡುವಾಗ ಫಿರ್ಯಾದಿ ನನಗೆ ಕಿರಿಕಿರಿ ಮಾಡಿದ್ದಾನೆ ಎಂದು ಪತ್ರದಲ್ಲಿ ನಮೂದಿಸಿಲ್ಲ. ಫಿರ್ಯಾದಿ ಕಿರಿಕಿರಿ ಮಾಡುತ್ತಿದ್ದಾನೆ ಎಂದು ರಾಜೀನಾಮೆ ಪತ್ರದಲ್ಲಿ ಬರೆಯಲು ತೊಂದರೆ ಇತ್ತು. ಆ ರೀತಿ ನಾನು ಬರೆದುಕೊಟ್ಟಿದ್ದರೆ ನನ್ನ ರಾಜೀನಾಮೆ ಪತ್ರವನ್ನು ಅವರು ಸ್ವೀಕರಿಸುತ್ತಿರಲಿಲ್ಲ. ಫಿರ್ಯಾದಿ ಕಿರಿಕಿರಿ ಮಾಡುತ್ತಿದ್ದಾರೆ ಎಂದು ಫಿರ್ಯಾದಿಯ ಮೇಲಾಧಿಕಾರಿಗೆ ದೂರನ್ನು ಕೊಟ್ಟಿಲ್ಲ.

ಫಿರ್ಯಾದಿ ನನಗೆ ಯಾವತ್ತೂ ಕಿರಿಕಿರಿ ಮಾಡಿಲ್ಲ ಅನ್ನುವುದು ಸರಿಯಲ್ಲ. ಫಿರ್ಯಾದಿ ಯಾವತ್ತೂ ಕೂಡ ಫೋನ್ ಮಾಡಿ ದೂರು ಕೊಡಲು ಹೇಳಿಲ್ಲ ಅನ್ನುವುದು ಸರಿಯಲ್ಲ. ನಾನು ಫಿರ್ಯಾದಿಯ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಮುಖ್ಯ ನ್ಯಾದಂ. ಕಾರವಾರ